# ಕನ್ನಡದಲ್ಲಿ ಸಂಚಾರ್ ಸಾಥಿ

ನಿಮ್ಮ ಮೊಬೈಲ್ ಕಳೆದುಹೋಯ್ತೆ ಅಥವಾ ಕಳವಾಯಿತೇ? ಅನಾಮಧೇಯ ಕರೆಗಳ ಕಿರಿಕಿರಿಯೇ? ಚಿಂತಿಸಬೇಡಿ. ನಿಮ್ಮ ನೆರವಿಗೆ ಕೇಂದ್ರ ಸರ್ಕಾರ ಪರಿಚಯಿಸಿದ 'ಸಂಚಾರ್ ಸಾಥಿ' ಆ್ಯಪ್ ಇದ್ದು, ಈಗ ಕನ್ನಡದಲ್ಲೂ ನಿಮ್ಮ ನೆರವಿಗೆ ನಿಲ್ಲಲಿದೆ.

■ **ಶಶಿಕುಮಾರ್ ಸಿ.**

'ಸಂಚಾರ್ ಸಾಥಿ' ಆ್ಯಪ್ ಮೂಲಕ ಅನುಮಾನಾಸ್ಪದ ಸಂವಹನಗಳ ಬಗ್ಗೆ ವರದಿ ಮಾಡಬಹುದು, ಕಳೆದುಹೋದ ಅಥವಾ ಕದ್ದ ಫೋನ್‌ಗಳನ್ನು ನಿರ್ಬಂಧಿಸಬಹುದು, ಪತ್ತೆಹಚ್ಚಬಹುದು, ಅನಧಿಕೃತ ಮೊಬೈಲ್ ಸಂಪರ್ಕಗಳನ್ನು ಪರಿಶೀಲಿಸಬಹುದು. ಇದೆಲ್ಲವನ್ನೂ ಕನ್ನಡದಲ್ಲೇ ಮಾಡಬಹುದು!

ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ಕನ್ನಡ ಮತ್ತು ಹಿಂದಿ ಸೇರಿದಂತೆ ಒಟ್ಟು 21 ಪ್ರಾದೇಶಿಕ ಭಾಷೆಗಳಲ್ಲಿ ಕಾರ್ಯನಿರ್ವಹಿಸುವ ಈ ಸಂಚಾರ್ ಸಾಥಿ ಮೊಬೈಲ್ ಆ್ಯಪ್‌ನ ಹೊಸ ಆವೃತ್ತಿಯನ್ನು ಈಚೆಗೆ ಬಿಡುಗಡೆ ಮಾಡಿದ್ದಾರೆ.

## ಲಕ್ಷಾಂತರ ಮೊಬೈಲ್ ಪತ್ತೆ

ಆ್ಯಂಡ್ರಾಯ್ಡ್ ಮತ್ತು ಐಒಎಸ್ ಪ್ಲಾಟ್‌ಫಾರ್ಮ್‌ಗಳಲ್ಲಿ ಈ ಆ್ಯಪ್ ಲಭ್ಯ. ದೇಶದಾದ್ಯಂತ ಬಹುಭಾಷೆಗಳಲ್ಲಿ ಮೊಬೈಲ್ ಬಳಕೆದಾರರಿಗೆ ಡಿಜಿಟಲ್ ಭದ್ರತೆಯನ್ನು ಇದು ಒದಗಿಸುತ್ತದೆ. ಆ್ಯಪ್‌ನ ಹೊಸ ಆವೃತ್ತಿಯನ್ನು ಸುಮಾರು 46 ಲಕ್ಷ ಬಳಕೆದಾರರು ಈಗಾಗಲೇ ಡೌನ್‌ಲೋಡ್ ಮಾಡಿಕೊಂಡು ಬಳಸುತ್ತಿದ್ದಾರೆ ಎಂದು ಇಲಾಖೆಯು ತಿಳಿಸಿದೆ. ಇದು ಆ್ಯಪ್ ಡೌನ್‌ಲೋಡ್ ಮಾಡಲು ಜನರು ಮುಗಿಬೀಳುತ್ತಿರುವುದರ ಸಂಕೇತವಾಗಿದೆ.

ಸ್ಮಾರ್ಟ್‌ಫೋನ್‌ಗಳನ್ನು ಕದಿಯುವ ದೊಡ್ಡ ಖದೀಮರ ಜಾಲವೇ ಸಕ್ರಿಯವಾಗಿದೆ. ಬಸ್‌ಗಳಲ್ಲಿ, ರೈಲುಗಳಲ್ಲಿ, ಮೆಟ್ರೊಗಳಲ್ಲಿ, ಮಾರುಕಟ್ಟೆಗಳಲ್ಲಿ ಅಥವಾ ಮನೆಗಳಲ್ಲಿಯೇ ಕೋಟ್ಯಂತರ ಮಂದಿಯು ತಮ್ಮ ಮೊಬೈಲ್‌ಗಳನ್ನು ಕಳೆದುಕೊಂಡಿದ್ದಾರೆ, ಕಳವು ಆಗಿವೆ. ಹೀಗೆ ಮೊಬೈಲ್ ಕಳೆದುಕೊಂಡವರು ಪೋರ್ಟಲ್ ಮತ್ತು ಆ್ಯಪ್ ಮೂಲಕ ದೂರು ಸಲ್ಲಿಸಿದ್ದು, ಈ ಆಧಾರದ ಮೇಲೆ ಇಲ್ಲಿಯವರೆಗೆ ಕಳೆದುಹೋದ ಅಥವಾ ಕದ್ದ 35 ಲಕ್ಷಕ್ಕೂ ಹೆಚ್ಚು ಫೋನ್‌ಗಳನ್ನು ನಿರ್ಬಂಧಿಸಲಾಗಿದೆ.

ಜೊತೆಗೆ 82 ಲಕ್ಷಕ್ಕೂ ಹೆಚ್ಚು ನಕಲಿ ಮೊಬೈಲ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಆ್ಯಪ್ ಪ್ರಾರಂಭಿಸಿದ ಕೇವಲ 24 ಗಂಟೆಗಳಲ್ಲಿ 1.35 ಕೋಟಿ ಸ್ಪೂಫ್ಡ್ (Spoofed) ಇಂಟರ್‌ನ್ಯಾಷನಲ್ ಕರೆಗಳನ್ನು ನಿರ್ಬಂಧಿಸಲಾಗಿದೆ. ಈ ವ್ಯವಸ್ಥೆಯು ಅಂತಹ ಕರೆಗಳ ಪ್ರಮಾಣವನ್ನು ದೇಶದಲ್ಲಿ ಶೇಕಡ 97 ರಷ್ಟು ಕಡಿಮೆ ಮಾಡಿದೆ ಎಂಬ ಮಾಹಿತಿಯನ್ನು ಸಚಿವರು ಹಂಚಿಕೊಂಡರು.




### ಏನಿದು ಸಂಚಾರ್ ಸಾಥಿ?

ಕೇಂದ್ರ ದೂರಸಂಪರ್ಕ ಇಲಾಖೆಯು ಕೆಲ ತಿಂಗಳುಗಳ ಹಿಂದೆ ದೇಶದ ಮೊಬೈಲ್ ಬಳಕೆದಾರರಿಗೆಂದೇ ಪರಿಚಯಿಸಿದ ಪೋರ್ಟಲ್ ಈ ಸಂಚಾರ್ ಸಾಥಿ. ಈಗಿದು ಆ್ಯಪ್ ಆಗಿಯೂ ಲಭ್ಯವಿದೆ. ಮೊಬೈಲ್ ಸಾಧನ ಸುರಕ್ಷತೆ ಮತ್ತು ಬಳಕೆದಾರರ ಜಾಗೃತಿಗೆ ಸಂಬಂಧಿಸಿದ ವಿವಿಧ ಉದ್ದೇಶಗಳಿಗಾಗಿ ಇದನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಸಂಬಂಧ ನಾಗರಿಕರು ಸುಲಭವಾಗಿ ತಮ್ಮ ದೂರುಗಳನ್ನು ಇಲ್ಲಿ ದಾಖಲಿಸಬಹುದಾಗಿದೆ.

ಕಳೆದುಹೋದ, ಕಳವಾದ ಮೊಬೈಲ್‌ಗಳನ್ನು ಪತ್ತೆಹಚ್ಚಲು, ಟೆಲಿಕಾಂ ನೆಟ್‌ವರ್ಕ್‌ಗಳಲ್ಲಿಯೂ ಅವುಗಳು ಕಾರ್ಯನಿರ್ವಹಿಸದಂತೆ ನಿರ್ಬಂಧಿಸಲು ಸಂಚಾರ್ ಸಾಥಿ ವೇದಿಕೆಯಾಗಿದೆ. ತಮ್ಮ ಹೆಸರಿನಲ್ಲಿ ನೋಂದಾಯಿಸಲಾದ ಮೊಬೈಲ್ ಸಂಪರ್ಕಗಳ ಸಂಖ್ಯೆಗಳನ್ನು ಗುರುತಿಸಲು ಮತ್ತು ಯಾವುದೇ ಅನಧಿಕೃತ ಸಂಪರ್ಕಗಳನ್ನು ವರದಿ ಮಾಡಲು ನೆರವಾಗುತ್ತದೆ. ಇದನ್ನು ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಟೆಲಿಮ್ಯಾಟಿಕ್ಸ್ (ಸಿಡಾಟ್) ಅಭಿವೃದ್ಧಿಪಡಿಸಿದೆ.

ಸಂಚಾರ್ ಸಾಥಿಯ ಸಿಇಐಆರ್ ವ್ಯವಸ್ಥೆಯಡಿಯಲ್ಲಿ, ಕಳೆದುಹೋದ ಮತ್ತು ಕಳ್ಳತನವಾದ 35.49 ಲಕ್ಷ ಸಾಧನಗಳನ್ನು ನಿರ್ಬಂಧಿಸಲಾಗಿದೆ. ಸಂಚಾರ್ ಸಾಥಿಯಡಿ ದಾಖಲಾದ ದೂರುಗಳಿಗೆ ಸಂಬಂಧಿಸಿದ 21.57 ಲಕ್ಷ ಮೊಬೈಲ್‌ಗಳು ಎಲ್ಲಿ ಸಕ್ರಿಯವಾಗಿವೆ ಎಂಬುದನ್ನು ಪತ್ತೆ ಹಚ್ಚಲಾಗಿದ್ದು, ಅವುಗಳನ್ನು ವಶಕ್ಕೆ ಪಡೆದುಕೊಳ್ಳುವ ನಿಟ್ಟಿನಲ್ಲಿ ಆ್ಯಪ್ ಕ್ರಮವಹಿಸಿದೆ. ಹೀಗೆ ವಶಪಡಿಸಿಕೊಂಡ ಮೊಬೈಲ್‌ಗಳ ಪೈಕಿ 5.19 ಲಕ್ಷ ಸಾಧನಗಳನ್ನು ದೂರುದಾರರಿಗೆ ಹಿಂದಿರುಗಿಸಲಾಗಿದೆ. ಈ ಕಾರ್ಯಕ್ಕೆ ಕೇಂದ್ರ ಸಂಸ್ಥೆಗಳು, ರಾಜ್ಯ ಪೊಲೀಸ್ ಪಡೆಗಳು, ಟೆಲಿಕಾಂ ಸೇವಾ ಪೂರೈಕೆದಾರರು ಸೇರಿದಂತೆ 620ಕ್ಕೂ ಅಧಿಕ ಸಂಸ್ಥೆಗಳ ಸಹಾಯವನ್ನು ಪಡೆಯಲಾಗುತ್ತಿದೆ.

## ಪತ್ತೆಗೆ ಕೃತಕ ಬುದ್ಧಿಮತ್ತೆ ನೆರವು

ಸಂಚಾರ್ ಸಾಥಿಯು ಕದ್ದ ಅಥವಾ ಕಳೆದುಹೋದ ಫೋನ್‌ಗಳನ್ನು ನಿರ್ಬಂಧಿಸಲು ಕೇಂದ್ರ ಸಲಕರಣೆ ಗುರುತಿನ ನೋಂದಣಿ (ಸಿಇಐಆರ್), ಡಿಜಿಟಲ್ ಗುಪ್ತಚರ ವೇದಿಕೆಗಳು ನಕಲಿ ದಾಖಲೆಗಳ ಮೇಲೆ ತೆಗೆದುಕೊಳ್ಳಲಾದ ಸಂಪರ್ಕಗಳನ್ನು ಪತ್ತೆಹಚ್ಚಲು ಕೃತಕ ಬುದ್ಧಿಮತ್ತೆ ಆಧರಿತ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಇದರ ಜೊತೆಗೆ ಸಂಭಾವ್ಯ ವಂಚನೆಗಳನ್ನು ತಡೆಗಟ್ಟಲು ಸುಧಾರಿತ ವ್ಯವಸ್ಥೆಗಳೊಂದಿಗೆ ಕೈಜೋಡಿಸಿದೆ.

ಆ್ಯಪ್ ಮತ್ತು ಪೋರ್ಟಲ್‌ಗೆ ಪ್ರತಿದಿನ 16 ಕೋಟಿ ಜನರು ಭೇಟಿ ಕೊಡುತ್ತಿದ್ದು, ಸರಾಸರಿ 2 ಲಕ್ಷ ಬಳಕೆದಾರರೊಂದಿಗೆ ಸಂವಹನ ನಡೆಸಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ. ಇದಕ್ಕಾಗಿಯೇ ಎಐ ಚಾಲಿತ ಎಎಸ್‌ಟಿಆರ್ ಉಪಕರಣ, ನಾಗರಿಕ ವರದಿಗಳು ಮತ್ತು ಪಾಲುದಾರರ ಪ್ರತಿಕ್ರಿಯೆಯನ್ನು ಬಳಸಿಕೊಂಡು 4.7 ಕೋಟಿಗೂ ಹೆಚ್ಚು ಅನಧಿಕೃತ ಮೊಬೈಲ್ ಸಂಪರ್ಕಗಳನ್ನು ನಿರ್ಬಂಧಿಸಿದೆ. ವಂಚನೆ ಚಟುವಟಿಕೆಗಳಲ್ಲಿ ಭಾಗಿಯಾದ 5.1 ಲಕ್ಷ ಮೊಬೈಲ್ ಹ್ಯಾಂಡ್‌ಸೆಟ್‌ಗಳ ಕಾರ್ಯಕ್ಕೂ ಕೊಕ್ಕೆ ಹಾಕಿದ್ದು, ಇದೇ ವಿಷಯಕ್ಕೆ 24.46 ಲಕ್ಷ ವಾಟ್ಸ್‌ಆ್ಯಪ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ. ಇದೇ ಉದ್ದೇಶದಿಂದ ಸಾಮೂಹಿಕ ಸಂದೇಶ ಕಳುಹಿಸುವ 20,000 ಮೊಬೈಲ್ ಸಂಖ್ಯೆಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ■